# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಸಂಖ್ಯೆ:ಮಾನಿಮಂ 18 ಅಡಏ 2013:

ಸದಸ್ಯ ಕಾರ್ಯದರ್ಶಿಯವರ ಕಛೇರಿ,
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್,
ಬೆಂಗಳೂರು –560001, ದಿನಾಂಕ: 19 JUL 2013

## ಅಧಿಕೃತ ಜ್ಞಾಪನ

ವಿಷಯ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿನ ಸಹಾಯಕ ಪರಿಸರ ಅಧಿಕಾರಿಗಳ/ಉಪ ಪರಿಸರ ಅಧಿಕಾರಿಗಳ/ಪರಿಸರ ಅಧಿಕಾರಿಗಳ/ಹಿರಿಯ ಪರಿಸರ ಅಧಿಕಾರಿಗಳ ವೃಂದದ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತಂತೆ.

=====

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿನ ಸಹಾಯಕ ಪರಿಸರ ಅಧಿಕಾರಿಗಳ/ಉಪ ಪರಿಸರ ಅಧಿಕಾರಿಗಳ/ಪರಿಸರ ಅಧಿಕಾರಿಗಳ/ಹಿರಿಯ ಪರಿಸರ ಅಧಿಕಾರಿಗಳ ಹಾಗೂ ಮುಖ್ಯ ಪರಿಸರ ಅಧಿಕಾರಿಗಳ ವೃಂದಗಳ ಸೇವಾ ಜೇಷ್ಠತಾ ಪಟ್ಟಿಗಳನ್ನು ಪರಿಷ್ಕೃತಗೊಳಿಸಲು ನಿರ್ಧರಿಸಿದ್ದು, ದಿನಾಂಕ 21-06-1976 ರಿಂದ 31-12-2012ರವರೆಗೆ ಮೇಲ್ಕಂಡ ವೃಂದಗಳ ಸೇವಾ ಜೇಷ್ಠತಾ ಪಟ್ಟಿಯನ್ನು ಕಾನೂನಿನ್ವಯ ಹಾಗೂ ಗೌರವಾನ್ವಿತ ರಾಷ್ಟ್ರ ಸರ್ವೋಚ್ಛ ನ್ಯಾಯಾಲಯವು ಶ್ರೀಯುತ ಬಾದಾಮಿ ವಿರುದ್ಧ ಕರ್ನಾಟಕ ಸರ್ಕಾರ ಹಾಗೂ ನಂತರದಲ್ಲಿ ಇದರ ವಿಶ್ಲೇಷಣೆಯಾಗಿ ಶ್ರೀಯುತ ಗೋನಾಳ್ ಭೀಮಪ್ಪ ವಿರುದ್ಧ ಕರ್ನಾಟಕ ಸರ್ಕಾರ ಇವರುಗಳ ಪ್ರಕರಣಗಳಲ್ಲಿ ನೇರ ನೇಮಕಾತಿ ಹಾಗೂ ಬಡ್ತಿ ಹುದ್ದೆಗಳ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಹೊರಡಿಸಿರುವ ಮೀಸಲಾತಿ ರೋಸ್ಟರ್‌ನ ಪಾಲನಾ ಸುತ್ತೋಲೆಯಂತೆ ಸೇವಾ ಜೇಷ್ಠತಾ ಪಟ್ಟಿಗಳನ್ನು ತಯಾರಿಸುವಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ತಯಾರಿಸಿ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಅನುಬಂಧ –1 ರಿಂದ 5 ರವರೆವಿಗೆ ಪ್ರಕಟಿಸಲಾಗಿದೆ.

ಈ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಈ ಕೆಳಕಂಡ ನಿಯಮಗಳನ್ವಯ ತಯಾರಿಸಿ ಪ್ರಕಟಿಸಲಾಗಿದೆ:

1. ಕ.ಸ.ಸೇ.(ಸೇವಾ ಹಿರಿತನ) ನಿಯಮಾವಳಿಗಳು 1957 ರ ನಿಯಮ 5(2) ರ ಮೇರೆಗೆ –ನೇಮಕಾತಿ ಆದೇಶದಲ್ಲಿ ನಿಗದಿ ಪಡಿಸಿದ ಅವಧಿಯ ನಂತರದ ದಿನಗಳಲ್ಲಿ ಕರ್ತವ್ಯಕ್ಕೆ ಹಾಜರದವರನ್ನು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಪರಿಗಣಿಸಲಾಗಿದೆ.

2. ಕ.ಸ.ಸೇ.(ಸೇವಾ ಹಿರಿತನ) ನಿಯಮಾವಳಿಗಳು 1957 ರ ನಿಯಮ 9 ರ ಮೇರೆಗೆ – ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು ಪ್ರಕಟಗೊಂಡ 02/09/1992 ರ ಹಿಂದಿನ ಅವಧಿಯನ್ನು ನಿಯಮಾವಳಿ ರಹಿತ ಅವಧಿಯೆಂದು ಪರಿಗಣಿಸಲಾಗಿದೆ.
3. ನಿಯಮಾವಳಿ ರಹಿತ ಅವಧಿಯಲ್ಲಿ ನೇಮಕಾತಿ ಹೊಂದಿರುವ ಅಧಿಕಾರಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕೇಂದ್ರ ಕಛೇರಿಯಲ್ಲಿ ಇರುವ ನೇಮಕಾತಿ ವಹಿಗೆ ಅನುಗುಣವಾಗಿ ಸಾದರ ಪಡಿಸಲಾಗಿದೆ.
4. ಮುಂಬಡ್ತಿ ಹುದ್ದೆಗಳ(ಎ ಗುಂಪಿನ ಕಿರಿಯ ಶ್ರೇಣಿಯವರೆವಿಗೆ) ಸೇವಾ ಹಿರಿತನವನ್ನು ನೀಡುವಾಗ್ಗೆ, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಅಧಿಕಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ ಡಿಪಿಎಆರ್ 22 ಎಸ್‌ಬಿಸಿ 79ರ ದಿನಾಂಕ 30.08.1978ರ ಮೇರೆಗೆ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗಿದೆ.

ಈ ಅಧಿಕೃತ ಜ್ಞಾಪನ ಪ್ರಕಟಗೊಂಡ 15 ದಿನಗಳೊಳಗಾಗಿ ಬಾಧಿತ ನೌಕರರು ಅವರ ಆಕ್ಷೇಪಣೆಗಳನ್ನು ಅಧ್ಯಕ್ಷರ ಕಛೇರಿಗೆ ಸಲ್ಲಿಸಬಹುದಾಗಿದೆ. ನಿಗದಿತ ಅವಧಿ ಮೀರಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಅಧ್ಯಕ್ಷರು
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಗೆ,

1. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು.
2. ಆಡಳಿತಾಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು.
3. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಎಲ್ಲಾ ಕಛೇರಿಗಳಿಗೆ ಮಾಹಿತಿಗಾಗಿ.
4. ಸೂಚನಾ ಫಲಕಕ್ಕೆ/ಸಂಬಂಧಿಸಿದ ಅಧಿಕಾರಿಗಳಿಗೆ.
5. ಸಂಬಂಧಿಸಿದ ಕಡತಗಳಿಗೆ/ಶಾಖಾ ರಕ್ಷಿತ ಕಡತ/ಹೆಚ್ಚುವರಿ ಪ್ರತಿಗಳು.